ಕಥಾವಸ್ತುವಿನ ಬಗ್ಗೆ ಹೇಳಬೇಕೆಂದರೆ ನನಗೆ ಅದು ಹೇಗಾಯಿತು ಅನ್ನುವುದು ಮುಖ್ಯ. ಪತ್ತೆದಾರಿ ಕತೆಯ ರೀತಿಯಲ್ಲಿ ಅನ್ನಬಹುದು. ಸತ್ತವರು ಯಾರು ಅಂತ ನಿಮಗೆ ಗೊತ್ತು. ಸಾಯಿಸಿದ್ದು ಯಾರು ಅಂತ ಕಂಡುಹಿಡಿಯಬೇಕು. ಅದಕ್ಕೆ ತಕ್ಕಂತೆ ಎಲ್ಲ ಸಂಗತಿಗಳನ್ನು ಪೋಣಿಸುತ್ತಾ ಓದುಗನಲ್ಲಿ ಕುತೂಹಲ ಹುಟ್ಟಿಸಬೇಕು.

◆ **'Beloved' ಕಾದಂಬರಿಯ ವಸ್ತು ಕೂಡ ಬಹುಬೇಗ ಓದುಗರಿಗೆ ಗೊತ್ತಾಗುತ್ತದೆ, ಅಲ್ಲವೇ?**

ಆ ಕಾದಂಬರಿಯಲ್ಲಿನ ಮಗುವಿನ ಹತ್ಯೆಯನ್ನು ತಕ್ಷಣವೇ ತಿಳಿಸುವುದು ಮುಖ್ಯವೆನಿಸಿತು. ಅದನ್ನು ಕಡೆಗಣಿಸುವುದು ಇಲ್ಲವೇ ಮುಂದೂಡುವುದು ಸಾಧ್ಯವಿರಲಿಲ್ಲ. ನಾನಾಗಲಿ ಓದುಗರಾಗಲಿ ಆ ಹಿಂಸೆಯ ಭಾಗವಾಗುವುದನ್ನು ತಪ್ಪಿಸುವ ಸಲುವಾಗಿ ಆ ಕ್ರಿಯೆಯ ಪರಿಣಾಮಗಳು, ಮಾಹಿತಿಗಳನ್ನು ಓದುಗರಿಗೆ ನೀಡಲು ಬಯಸಿದೆ. ಸೇಥೆ ತನ್ನ ಮಗುವಿನ ಗಂಟಲನ್ನು ಕತ್ತರಿಸುವಾಗಿನ ವಾಕ್ಯ ಬರೆಯುವಾಗ ಹೇಗಿದ್ದೆ ಎನ್ನುವುದು ನೆನಪಿದೆ. ಟೇಬಲ್‌ನಿಂದ ಎದ್ದು ಸುಮಾರು ಹೊತ್ತು ಸುತ್ತಾಡಿಕೊಂಡು ಬಂದು ಬರೆದಿದ್ದನ್ನು ಓದಿ ಮತ್ತೆ ಮತ್ತೆ ಆ ವಾಕ್ಯವನ್ನು ತಿದ್ದಿ ಬರೆದಿದ್ದೆ. ಪ್ರತಿಬಾರಿ ಬರೆದಾಗ ಹ್ಞಾಂ ಇದು ಸರಿಯಾಗಿದೆ ಅನ್ನಿಸುತ್ತಿತ್ತು. ಆದರೆ, ಮತ್ತೆ ಅಲ್ಲಿ ಕೂರಲಾಗದೆ ಹೊರಗೆ ಸುತ್ತಾಡಿ ಬರುತ್ತಿದ್ದೆ. ಆ ಕೃತ್ಯವನ್ನು ವೈಭವೀಕರಿಸದೆ ತಣ್ಣಗೆ ದಾಟಿಸಬೇಕಿತ್ತು. ಭಾಷೆ ಹಿಂಸೆಯೊಂದಿಗೆ ಪೈಪೋಟಿಗೆ ಬಿದ್ದರೆ ಅಶ್ಲೀಲವಾಗಿಬಿಡುತ್ತದೆ.

◆ **ಶೈಲಿ ಕೂಡ ಬಹಳ ಮುಖ್ಯ. 'Jazz' ಕಾದಂಬರಿಗೆ ಸಂಬಂಧಿಸಿದಂತೆ ಈ ಕುರಿತು ಹೇಳುವಿರಾ?**




ಸಂಗೀತಗಾರನ ಬಳಿ ನಿಮಗೆ ನೀಡಲು ಬಹಳಷ್ಟು ಇದ್ದರೂ ಎಲ್ಲವನ್ನೂ ಒಂದೇ ಸಲಕ್ಕೆ ಕೊಡುವುದಿಲ್ಲ. 'Jazz' ಕಾದಂಬರಿಯಲ್ಲಿ ಈ ಭಾವವನ್ನು ಹಿಡಿಯಲು ಬಯಸಿದೆ. ಅದೊಂದು ಬಗೆಯ ಸಂಯಮ. ತನ್ನ ಬಳಿ ಇರುವುದನ್ನು ಎಷ್ಟು ಬೇಕೋ ಅಷ್ಟು ಯಾವಾಗ ಬೇಕೋ ಆಗ ಮಾತ್ರ ಕೊಡುವ ಸಂಯಮ. ಎಲ್ಲಿ ನಿಲ್ಲಿಸಬೇಕು ಅನ್ನುವುದು ನಿರಂತರ ಕಲಿಕೆಯಿಂದ ಸಿದ್ಧಿಸುವಂತಹದ್ದು. ಮೊದಲು ನನಗೂ ಅದು ಸಾಧ್ಯವಾಗಿರಲಿಲ್ಲ. 'Song of Solomon' ಬರೆದ ಮೇಲೆ ಪ್ರತಿಮೆಗಳು, ಭಾಷೆ ಇವುಗಳನ್ನೆಲ್ಲ ಹಿತಮಿತವಾಗಿ ಬಳಸುವುದು ಹೇಗೆ ಎನ್ನುವುದು ಅರಿವಾಯಿತು. 'Jazz' ಕಾದಂಬರಿಯನ್ನು ಬಹಳ ಎಚ್ಚರಿಕೆಯಿಂದ ಬರೆದೆ. ಕಲಾವಿದನೊಬ್ಬ ನಿರಂತರ ಅಭ್ಯಾಸದ ಮೂಲಕ ತನ್ನ ಕಲಾಕೃತಿ ಅತ್ಯಂತ ಸಹಜ ಸೊಬಗಿನಿಂದ ಕಂಗೊಳಿಸುವಂತೆ ಮಾಡುವಂತೆ ಈ ಕಾದಂಬರಿಯನ್ನು ಬರೆದೆ. ಯಾವಾಗಲೂ ಬರವಣಿಗೆಯ ಪ್ರಕ್ರಿಯೆಯಲ್ಲಿ ಎಚ್ಚರಿಕೆಯಿಂದಲೇ ತೊಡಗಿಕೊಳ್ಳುತ್ತೇನೆ. ಕಲಾಕೃತಿ ಅತ್ಯಂತ ಸಹಜವಾಗಿ, ಅದ್ಭುತವಾಗಿ ಕಾಣುವುದು ನಿರಂತರ ಅಭ್ಯಾಸ ಹಾಗೂ ಅದರ ರಚನಾ ವಿನ್ಯಾಸದ ಅರಿವಿದ್ದಾಗ ಮಾತ್ರ. ಮಿತವ್ಯಯ ಕೂಡ ಅಭ್ಯಾಸದಿಂದ ಮಾತ್ರ ಸಾಧ್ಯವಾಗುವಂತಹದ್ದು. ಆಗಷ್ಟೇ ನೀವು ಏನನ್ನೇ ಆಗಲಿ ದುಂದುವೆಚ್ಚ ಮಾಡುವುದಿಲ್ಲ. ಯಾವುದರಿಂದಲೂ ಅತಿಯಾಗಿ ಸಂತೋಷವನ್ನೂ ಪಡಬಾರದು ಹಾಗೇ ಎಂದೂ ಸಂತೃಪ್ತರಾಗಲೂಬಾರದು. ಕೃತಿಯನ್ನು ಮುಗಿಸಿದಾಗ ಇನ್ನಷ್ಟು ಮತ್ತಷ್ಟು ಎನ್ನುವ ಹಸಿವು ನಿಜಕ್ಕೂ ಬಹಳ ಪ್ರಭಾವಶಾಲಿಯಾದದ್ದು. ಜೊತೆಗೆ, ಈಗಲ್ಲದಿದ್ದರೆ ಮುಂದೊಮ್ಮೆ ಬಳಸಬಹುದು ಎನ್ನುವ ಸಂತೃಪ್ತ ಭಾವನೆಯೂ ಇರಬೇಕು. ಕಲಾವಿದನ ಸೃಜನಶೀಲತೆಗೆ ಕೊನೆಯೆಂಬುದಿಲ್ಲವಲ್ಲ.